REGISTERED WITH RNI NEW DELHI REG. N0.69683/97-Postal Registration No.RNP/KA/BGS/2259/2021-2023
Office of Posting: Bangalore PSO, Bangalore - 560026.; Date of Posting & Publishing Every Wednesday; Price Rs. 2 (Pages-8)

ಪಟ್ಟಣ ಸಹಕಾರ ಬ್ಯಾಂಕುಗಳ

# ವಾರ್ತಾ ಪತ್ರಿಕೆ

ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳದ ಅಧಿಕೃತ ವಾರಪತ್ರಿಕೆ

ಸಂಪುಟ : 29 | ಸಂಚಿಕೆ : 10 | ಜೂನ್ 15, 2022 | ಬುಧವಾರ | ಪುಟಗಳು : 8 | ಬೆಲೆ : 2/-

## ಶ್ರೇಣಿ–I (Tier-I) & ಶ್ರೇಣಿ–II (Tier-II) ಪಟ್ಟಣ ಸಹಕಾರ ಬ್ಯಾಂಕುಗಳ ಗೃಹ ಸಾಲ ವಿತರಣೆ ಮಿತಿ ಹೆಚ್ಚಳ ಮಾಡಿದ ಆರ್‌ಬಿಐ

**ಮುಂಬಯಿ :** ಪಟ್ಟಣ ಸಹಕಾರಿ ಬ್ಯಾಂಕ್‌ಗಳು (ಯುಸಿಬಿಗಳು) ವೈಯಕ್ತಿಕ ಸಾಲಗಾರರಿಗೆ ನೀಡಬಹುದಾದ ಗೃಹ ಸಾಲದ ಗರಿಷ್ಠ ಮೊತ್ತದ ಮಿತಿಯನ್ನು ಕನಿಷ್ಠ ಶೇ.100ರಷ್ಟು ಏರಿಕೆ ಮಾಡಲಾಗಿದೆ ಎಂದು ಆರ್‌ಬಿಐ ಗವರ್ನರ್ ತಿಳಿಸಿದ್ದಾರೆ.

11ವರ್ಷಗಳ ಸುದೀರ್ಘ ಕಾಲದ ಬಳಿಕ ಈ ಮಿತಿಗಳ ಪರಿಷ್ಕರಣೆ ನಡೆಯುತ್ತಿದೆ. ಆರ್‌ಬಿಐನ ಪ್ರಕಟಣೆ ಪ್ರಕಾರ ಶ್ರೇಣಿ–I ಪಟ್ಟಣ ಸಹಕಾರ ಬ್ಯಾಂಕುಗಳಿಗೆ ರೂ.30 ಲಕ್ಷಗಳಿಂದ ರೂ.60 ಲಕ್ಷಗಳಿಗೆ ಹಾಗೂ ಶ್ರೇಣಿ–IIಪಟ್ಟಣ ಸಹಕಾರ ಬ್ಯಾಂಕುಗಳಿಗೆ ಗೃಹ ಸಾಲದ ಮಿತಿಯನ್ನು ರೂ.70 ಲಕ್ಷಗಳಿಂದ ರೂ.140 ಲಕ್ಷಗಳಿಗೆ ಹೆಚ್ಚಿಸಲಾಗಿದೆ.

**ಮನೆ ಬಾಗಿಲಿಗೆ ಬ್ಯಾಂಕಿಂಗ್ :** ದಿನಾಂಕ : 08.06.2022ರಂದು ಮತ್ತೊಂದು ಸುತ್ತೋಲೆ ಹೊರಡಿಸಿ ಇನ್ನು ಮುಂದೆ ಪಟ್ಟಣ ಸಹಕಾರ ಬ್ಯಾಂಕುಗಳು ಮನೆ ಬಾಗಿಲಿಗೆ ಬ್ಯಾಂಕಿಂಗ್ (Door Step Banking) ಸೇವೆಗಳನ್ನು ಒದಗಿಸಲು ಅವಕಾಶ ಕಲ್ಪಿಸಲಾಗಿದೆ.




## 100 ವರ್ಷ ಪೂರೈಸಿದ ಪಟ್ಟಣ ಸಹಕಾರ ಬ್ಯಾಂಕುಗಳಿಗೆ ರಾಷ್ಟ್ರೀಯ ಪಟ್ಟಣ ಸಹಕಾರ ಬ್ಯಾಂಕುಗಳ ಮಹಾಮಂಡಳದ (NAFCUB) ವತಿಯಿಂದ ದಿನಾಂಕ : 23.06.2022 ರಂದು ಸನ್ಮಾನ ಸಮಾರಂಭ

ನವದೆಹಲಿಯ ರಾಷ್ಟ್ರೀಯ ಪಟ್ಟಣ ಸಹಕಾರ ಬ್ಯಾಂಕುಗಳ ಮಹಾಮಂಡಳವು ದಿನಾಂಕ 23 ಜೂನ್ 2022ರ ಗುರುವಾರದಂದು ನವದೆಹಲಿಯ ವಿಜ್ಞಾನ ಭವನದಲ್ಲಿ "ನ್ಯಾಷನಲ್ ಕಾನ್ಕ್ಲೇವ್" ಅನ್ನು ಪಟ್ಟಣ ಸಹಕಾರ ಬ್ಯಾಂಕುಗಳ ಸನ್ಮಾನ ಕಾರ್ಯಕ್ರಮವನ್ನು ಆಯೋಜಿಸಿರುತ್ತದೆ. ಈ ಕಾರ್ಯಕ್ರಮದಲ್ಲಿ ಮುಖ್ಯಅತಿಥಿಗಳಾಗಿ ಗೌರವಾನ್ವಿತ ಕೇಂದ್ರ ಗೃಹ ಮತ್ತು ಸಹಕಾರ ಸಚಿವರಾದ ಶ್ರೀ ಅಮಿತ್ ಶಾ ರವರು ಮತ್ತು ಇತರೇ ಗಣ್ಯರುಗಳು ಭಾಗವಹಿಸಲಿದ್ದಾರೆ.

ಈ ಸಂದರ್ಭದಲ್ಲಿ 100 ವರ್ಷ (ಶತಮಾನೋತ್ಸವ) ಪೂರೈಸಿದ ಪಟ್ಟಣ ಸಹಕಾರ ಬ್ಯಾಂಕುಗಳಿಗೆ ರಾಷ್ಟ್ರೀಯ ಪಟ್ಟಣ ಸಹಕಾರ ಬ್ಯಾಂಕುಗಳ ಮಹಾಮಂಡಳದಿಂದ ಸನ್ಮಾನಿಸುವ ಕಾರ್ಯಕ್ರಮ ಏರ್ಪಡಿಸಿರುವುದಾಗಿ ತಿಳಿಸಿರುತ್ತಾರೆ. ಪ್ರಯುಕ್ತ, ತಮ್ಮ ಬ್ಯಾಂಕು 100ವರ್ಷ ಪೂರೈಸಿದ್ದಲ್ಲಿ ರಾಷ್ಟ್ರೀಯ ಪಟ್ಟಣ ಸಹಕಾರ ಬ್ಯಾಂಕುಗಳ ಮಹಾಮಂಡಳವು ಕೇಳಿರುವ ಮಾಹಿತಿಗಳನ್ನು ಮತ್ತು ಪ್ರತಿನಿಧಿ ಶುಲ್ಕವನ್ನು ನಿಗದಿತ ಅವಧಿಯಲ್ಲಿ ಪಾವತಿಸಿ ಸಮಾರಂಭದಲ್ಲಿ ಭಾಗವಹಿಸಲು ಕೋರಲಾಗಿದೆ. ಈ ಸಮಾರಂಭದಲ್ಲಿ ರೂ.750 ಕೋಟಿಗಿಂತ ಹೆಚ್ಚು ಠೇವಣಿ ಹೊಂದಿರುವ ಪಟ್ಟಣ ಸಹಕಾರ ಬ್ಯಾಂಕುಗಳಿಗೆ ಭಾಗವಹಿಸಲು ಅವಕಾಶ ಕಲ್ಪಿಸಿರುವುದಾಗಿ ತಿಳಿಸಿರುತ್ತಾರೆ.

2 ಕ್ರೆಡಿಟ್ ಕಾರ್ಡ್‌ನಿಂದ ಯುಪಿಐ ಮೂಲಕವೂ ಪಾವತಿ : ಆರ್‌ಬಿಐ ಪ್ರಸ್ತಾವನೆ
4 ನಾರಾಯಣ ಗುರು ಬ್ಯಾಂಕ ಲಿ., ಉಡುಪಿ : ಅಧ್ಯಕ್ಷರಾಗಿ ಹರಿಶ್ಚಂದ್ರ ಅಮೀನ್
7 ನಿಮ್ಮ ಪ್ರಶ್ನೆ – ನಮ್ಮ ಉತ್ತರ

## ಅತ್ಮೀಯ ಸಹಕಾರಿಗಳೇ...



# ಸುಳ್ಳು, ಹಾನಿಕಾರಕ ಜಾಹೀರಾತುಗಳ ವಿಷಯದಲ್ಲಿ ಜನ ಎಚ್ಚೆತ್ತುಕೊಳ್ಳುತ್ತಿರುವುದು ಸ್ವಾಗತಾರ್ಹ

ಇತ್ತೀಚಿನ ಪತ್ರಿಕಾ ವರದಿಯೊಂದು ನನ್ನ ಗಮನ ಸೆಳೆಯಿತು. ಅದು, ಶೈಕ್ಷಣಿಕ ಸಂಸ್ಥೆಯೊಂದರ ಜಾಹೀರಾತಿನಲ್ಲಿ ವಿದ್ಯಾರ್ಥಿಗಳು ಮತ್ತು ಪೋಷಕರನ್ನು ದಾರಿ ತಪ್ಪಿಸುವ ರೀತಿಯಲ್ಲಿ ಜನಪ್ರಿಯ ನಟನೊಬ್ಬ ಕಾಣಿಸಿಕೊಂಡಿರುವ ವಿಷಯ. ಈ ಕುರಿತು ಆ ನಟನ ವಿರುದ್ಧ ಸಾಮಾಜಿಕ ಕಾರ್ಯಕರ್ತರೊಬ್ಬರು ದೂರು ದಾಖಲಿಸಿದ್ದಾರೆ.

ನಮ್ಮಲ್ಲಿ ಜನಪ್ರಿಯ ಸಿನಿಮಾ ನಟರು, ಕ್ರೀಡಾ ಪಟುಗಳು ಹಲವಾರು ವಾಣಿಜ್ಯ ಸಂಸ್ಥೆಗಳ ಜಾಹೀರಾತಿನ ರಾಯಭಾರಿಗಳಾಗಿದ್ದಾರೆ. ಇತ್ತೀಚೆಗೆ ಅಪಾರ ಹಣ ಪಡೆದು ಜನರ ಆರೋಗ್ಯಕ್ಕೆ ಹಾನಿಕರವಾದ ಅಮಲುಕಾರಕ ಜಾಹೀರಾತಿನ ಪ್ರಚಾರದಲ್ಲಿ ಕಾಣಿಸಿಕೊಂಡ ಮೂವರು ಜನಪ್ರಿಯ ಚಿತ್ರ ನಟರ ವಿರುದ್ಧ ಸಾಮಾಜಿಕ ಮಾಧ್ಯಮಗಳಲ್ಲಿ ಬಹು ದೊಡ್ಡ ಆಂದೋಲನವೇ ನಡೆದು, ಅವರುಗಳು ಇನ್ನು ಮುಂದೆ ಈ ರೀತಿಯ ಜಾಹೀರಾತಿನಲ್ಲಿ ನಟಿಸುವುದಿಲ್ಲ ಎಂದು ಹೇಳಬೇಕಾಯಿತು.

ಮೇಲಿನ ಎರಡು ಘಟನೆಗಳು ಸುಳ್ಳು, ಹಾನಿಕಾರಕ ಜಾಹೀರಾತುಗಳ ವಿಷಯದಲ್ಲಿ ಈಗೀಗ ಜನ ಎಚ್ಚೆತ್ತುಕೊಳ್ಳುತ್ತಿರುವುದನ್ನು ತೋರಿಸುತ್ತಿದೆ. ಆದರೆ ಇಷ್ಟು ಮಾತ್ರ ಸಾಲದು. ಜನ ಎಲ್ಲ ಬಗೆಯ ಜಾಹೀರಾತಿನ ವಂಚನೆಯ ಬಗ್ಗೆಯೂ ಎಚ್ಚೆತ್ತುಕೊಳ್ಳಬೇಕಿದೆ.

ಇದು ಏನೇ ಇರಲಿ, ವಸ್ತುಗಳನ್ನು ಕೊಳ್ಳುವ ನಮ್ಮ ಬಹುತೇಕ ಜನರಿಗೆ ಗ್ರಾಹಕ ಹಕ್ಕುಗಳ ಕುರಿತು ತಿಳಿವಳಿಕೆಯೇ ಇಲ್ಲವಾಗಿದೆ. ತಿಳಿದಿದ್ದರೂ ಆದ ಅನ್ಯಾಯಕ್ಕೆ ಎಲ್ಲಿ, ಯಾರಿಗೆ ದೂರು ನೀಡುವುದು ಎನ್ನುವ ಗೊಂದಲ. ಜನರ ಈ ನಡೆಯನ್ನು ಚೆನ್ನಾಗಿ ಬಲ್ಲ ವ್ಯಾಪಾರಿಗಳು ವಂಚನೆ ಮಾಡುತ್ತಲೇ ಇರುತ್ತಾರೆ, ದುಪ್ಪಟು ಲಾಭಮಾಡಿಕೊಳ್ಳುತ್ತಲೇ ಇರುತ್ತಾರೆ. ಗ್ರಾಹಕರ ಈ ದೌರ್ಬಲ್ಯ ಅರಿತಿರುವ ವ್ಯಾಪಾರಿಗಳು ವಂಚನೆ ಮಾಡುತ್ತಲೇ ಇರುತ್ತಾರೆ.

ಆದರೆ ಇದನ್ನು ನಿಯಂತ್ರಿಸಬೇಕಿರುವ ಕಾನೂನು ಮಾಪನಶಾಸ್ತ್ರ ಇಲಾಖೆ ಅಧಿಕಾರಿಗಳು, ವ್ಯಾಪಾರಿಗಳ ಮೇಲೆ ತೋರಿಕೆಯ ದಾಳಿ ನಡೆಸಿ ತಮ್ಮ ಕೆಲಸವಾಯಿತು ಎಂಬಂತೆ ನಟಿಸುತ್ತಾರೆ. ಅವರಿಗೆ ಸರ್ಕಾರಕ್ಕೆ ತಾವು ಸಲ್ಲಿಸಲು ದಾಳಿ ನಡೆಸಿದ ದಾಖಲೆಯಷ್ಟೆ ಬೇಕಿರುತ್ತದೆ ಅಷ್ಟೆ!

ಇದರಿಂದಾಗಿ ಯಾವುದೇ ಪ್ರವಾಸಿ ತಾಣ ಇರಲಿ, ಚಲನಚಿತ್ರಮಂದಿರದಲ್ಲಾಗಲಿ ನೀವು ಕುಡಿಯುವ ನೀರು ಕೊಂಡರೂ ಅದಕ್ಕೆ ಅಧಿಕ ಬೆಲೆ ತೆರಬೇಕಾದಂತ ಪರಿಸ್ಥಿತಿ ಇದೆ. ಇದನ್ನು ವಿರೋಧಿಸಿ ಪ್ರತಿಭಟಿಸಿದರೆ ವ್ಯಾಪಾರಿಗಳಿಂದ ಕೆಟ್ಟ ಮಾತು ಕೇಳಬೇಕಾಗುತ್ತದೆ. ಸಾರ್ವಜನಿಕ ಸ್ಥಳದಲ್ಲಿ ಎಲ್ಲರ ಮುಂದೆ ಅಪಮಾನಕ್ಕೆ ಒಳಗಾಗಬೇಕಾಗುತ್ತದೆ.

ಇದಕ್ಕೆ ಪರಿಹಾರವೇ ಇಲ್ಲವೇ? ಇದೆ, ಎಲ್ಲ ಮಾರಾಟ ಸ್ಥಳಗಳಲ್ಲೂ ಪದಾರ್ಥಗಳ ಮೇಲೆ ಏಕರೂಪ ದರ ನಿಗದಿಪಡಿಸಬೇಕು. ಈ ಬಗೆಯ ವ್ಯಾಪಾರದಲ್ಲಿ ತೊಡಗುವವರ ಮೇಲೆ ಅಧಿಕ ದಂಡ ವಿಧಿಸುವ ಹಾಗೂ ಶಿಕ್ಷೆ ಪ್ರಮಾಣವನ್ನೂ ಹೆಚ್ಚಿಸುವ ಕಾಯ್ದೆ ರೂಪಿಸಬೇಕಿದೆ. ಇದಕ್ಕೆ ಕೇಂದ್ರ ಸರಕಾರ ಮಾಪನ ಕಾಯಿದೆಗೆ ಅಗತ್ಯ ತಿದ್ದುಪಡಿ ತರಬೇಕಿದೆ ಹಾಗೂ ಖರೀದಿ ಮತ್ತು ನಿಯಂತ್ರಣ ಮತ್ತು ನಿರ್ವಹಣಾ ವ್ಯವಸ್ಥೆಗಳನ್ನು ಪ್ರತ್ಯೇಕ ಘಟಕಗಳಾಗಿ ವಿಂಗಡಿಸಿ ಅದಕ್ಕೆ ಹೆಚ್ಚಿನ ಸಿಬ್ಬಂದಿ ಒದಗಿಸಿ, ಕಾಯ್ದೆ ಜಾರಿಯಲ್ಲಿ ಅಸಡ್ಡೆ ತೋರುವ ಅಧಿಕಾರಿಗಳನ್ನು ದಂಡಿಸಬೇಕು. ಇದು ಆದಷ್ಟು ಬೇಗ ಆಗಲಿ ಎಂದು ಆಶಿಸುವ.

▶▶ ಎಚ್.ಕೆ. ಪಾಟೀಲ
ಅಧ್ಯಕ್ಷರು

# ಕ್ರೆಡಿಟ್ ಕಾರ್ಡ್‌ನಿಂದ ಯುಪಿಐ ಮೂಲಕವೂ ಪಾವತಿ : ಆರ್‌ಬಿಐ ಪ್ರಸ್ತಾವನೆ




**ಮುಂಬೈ :** ಕ್ರೆಡಿಟ್ ಕಾರ್ಡ್‌ಗಳನ್ನು ಯುಪಿಐ (ಯೂನಿಫೈಡ್ ಪೇಮೆಂಟ್ಸ್ ಇಂಟರ್‌ಫೇಸ್) ಜತೆ ಲಿಂಕ್ ಮಾಡುವ ಬಗ್ಗೆ ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಪ್ರಸ್ತಾವನೆ ಸಲ್ಲಿಸಿದೆ. ಈ ವ್ಯವಸ್ಥೆ ಜಾರಿಯಾದಲ್ಲಿ ಕ್ರೆಡಿಟ್ ಕಾರ್ಡ್ ಬಳಸಿಕೊಂಡು ಯುಪಿಐ ಮೂಲಕ ಪಾವತಿ ಮಾಡುವುದು ಸಾಧ್ಯವಾಗಲಿದೆ. ಸದ್ಯ, ಉಳಿತಾಯ ಖಾತೆ ಅಥವಾ ಕರೆಂಟ್ ಅಕೌಂಟ್‌ನ ಡೆಬಿಟ್ ಕಾರ್ಡ್‌ಗಳನ್ನು ಯುಪಿಐಗೆ ಲಿಂಕ್ ಮಾಡುವ ಮೂಲಕ ಪಾವತಿ ಮಾಡಲಾಗುತ್ತಿದೆ.

ಕ್ರೆಡಿಟ್ ಕಾರ್ಡ್‌ಗಳನ್ನು ಯುಪಿಐ ಜತೆ ಲಿಂಕ್ ಮಾಡುವ ಪ್ರಸ್ತಾವನೆ ಸಲ್ಲಿಸಲಾಗಿದೆ ಎಂದು ಆರ್‌ಬಿಐ ಗವರ್ನರ್ ಶಕ್ತಿಕಾಂತ ದಾಸ್ ಬುಧವಾರ ಹೇಳಿದರು. ಆರ್‌ಬಿಐ ಹಣಕಾಸು ನೀತಿ ಪ್ರಕಟಿಸಿ ಅವರು ಈ ಮಾಹಿತಿ ನೀಡಿದರು.

ರಾಷ್ಟ್ರೀಯ ಪಾವತಿ ನಿಗಮ (ಎನ್‌ಪಿಸಿಐ) ನೀಡುತ್ತಿರುವ ರುಪೇ ಕ್ರೆಡಿಟ್ ಕಾರ್ಡ್‌ಗಳೊಂದಿಗೆ ಯುಪಿಐ ಲಿಂಕ್ ಯೋಜನೆ ಆರಂಭಕ್ಕೆ ಉದ್ದೇಶಿಸಲಾಗಿದೆ. ವ್ಯವಸ್ಥೆಯು ಅಭಿವೃದ್ಧಿ ಹೊಂದಿದಂತೆ ಇತರ ಕಾರ್ಡ್‌ಗಳಿಗೂ ಯೋಜನೆ ವಿಸ್ತರಿಸಲಾಗುವುದು ಎಂದು ಅವರು ತಿಳಿಸಿದ್ದಾರೆ. ಈ ವ್ಯವಸ್ಥೆಯು ಯುಪಿಐ ಮೂಲಕ ಮಾಹಿತಿಗಳನ್ನು ಮಾಡುವಲ್ಲಿ ಗ್ರಾಹಕರಿಗೆ ನೆರವಾಗಲಿದೆ ಎಂದು ಅವರು ಅಭಿಪ್ರಾಯಪಟ್ಟರು.

ಆರ್‌ಬಿಐ ಹಣಕಾಸು ನೀತಿ ಪ್ರಕಟಗೊಂಡಿದ್ದು, ರೆಪೊ ದರವನ್ನು ಶೇ.0.50ರಷ್ಟು ಹೆಚ್ಚಿಸಿ ಶೇ.4.90ಕ್ಕೆ ನಿಗದಿಪಡಿಸಲಾಗಿದೆ. ಪ್ರಸಕ್ತ ಹಣಕಾಸು ವರ್ಷದ ಮೊದಲ ಮೂರು ತ್ರೈಮಾಸಿಕದಲ್ಲಿ ಹಣದುಬ್ಬರ ಪ್ರಮಾಣ ಶೇ.6ರ ಮೇಲಿರಲಿದೆ ಎಂದು ಅಂದಾಜಿಸಲಾಗಿದ್ದು, ಪ್ರಸಕ್ತ ಹಣಕಾಸು ವರ್ಷದ ಆರ್ಥಿಕ ವೃದ್ಧಿ ದರ ಶೇ.7.2ರಷ್ಟು ಇರಲಿದೆ ಎಂದು ಅಂದಾಜಿಸಲಾಗಿದೆ.

# ಹಣದುಬ್ಬರ ಭೀತಿ; ಕುಸಿತ ಕಂಡ ಸೆನ್ಸೆಕ್ಸ್, ನಿಫ್ಟಿ



**ಮುಂಬೈ :** ಭಾರತೀಯ ಷೇರುಮಾರುಕಟ್ಟೆಯಲ್ಲಿ ಹಣದುಬ್ಬರ ಭೀತಿ ಮುಂದುವರೆದಿದ್ದು, ವಹಿವಾಟಿನ ವಾರಾಂತ್ಯದಲ್ಲಿಯೂ ಕೂಡ ಸೆನ್ಸೆಕ್ಸ್ ಮತ್ತು ನಿಫ್ಟಿ ಕುಸಿತಗೊಂಡಿದೆ.

ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ಬೆಲೆ ಹೆಚ್ಚಳವಾದ ಪರಿಣಾಮವಾಗಿ, ಹಣದುಬ್ಬರ ಇನ್ನಷ್ಟು ಜಾಸ್ತಿ ಆಗುವ ಭೀತಿ ಎದುರಾಗಿದೆ. ಇದರಿಂದಾಗಿ ಹೂಡಿಕೆದಾರರು ಸುರಕ್ಷಿತ ಹೂಡಿಕೆ ಆಯ್ಕೆಗಳತ್ತ ಮುಖ ಮಾಡಿದ್ದು, ಇದು ಭಾರತೀಯ ಷೇರುಮಾರುಕಟ್ಟೆ ಕುಸಿತಕ್ಕೆ ಕಾರಣವಾಗುತ್ತಿದೆ. ಇಂದಿನ ವಹಿವಾಟು ಮುಕ್ತಾಯದ ಹೊತ್ತಿಗೆ ಸೆನ್ಸೆಕ್ಸ್ ಶೇ.1.84ರಷ್ಟು ಅಂದರೆ 1,016.84 ಅಂಶಗಳ ಕುಸಿತ ಕಂಡಿದೆ. ಅಂತೆಯೇ ನಿಫ್ಟಿ ಕೂಡ ಶೇ.1.68ರಷ್ಟು ಅಂದರೆ 276.30 ಅಂಶಗಳ ಕುಸಿತ ಕಂಡಿದೆ.

ವಿದೇಶಿ ಬಂಡವಾಳ ಹೂಡಿಕೆದಾರರು ಬಂಡವಾಳ ಹಿಂತೆಗೆತ ಮುಂದುವರಿಸಿರುವುದು ಹಾಗೂ ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯವು ಇನ್ನಷ್ಟು ಕುಸಿದಿರುವುದು ಕೂಡ ಸೂಚ್ಯಂಕಗಳ ಇಳಿಕೆಗೆ ಕಾರಣವಾಗಿವೆ ಎಂದು ಆರ್ಥಿಕ ತಜ್ಞರು ಅಭಿಪ್ರಾಯಪಟ್ಟಿದ್ದಾರೆ.

ಶುಕ್ರವಾರದ ವಹಿವಾಟಿನಲ್ಲಿ ಹೂಡಿಕೆದಾರರು ಒಟ್ಟು 3.11 ಲಕ್ಷ ಕೋಟಿ ನಷ್ಟವಾಗಿದ್ದು, ಬಿಎಸ್‌ಇಯಲ್ಲಿ ನೋಂದಾಯಿತ ಆಗಿರುವ ಕಂಪನಿಗಳ ಬಂಡವಾಳ ಮೌಲ್ಯವು ಇಳಿದಿದೆ. ಅಂತೆಯೇ ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ಬ್ರೆಂಟ್ ಕಚ್ಚಾ ತೈಲದ ಬೆಲೆಯು ಶೇ 0.45ರಷ್ಟು ಜಾಸ್ತಿಯಾಗಿ ಪ್ರತಿ ಬ್ಯಾರೆಲ್‌ಗೆ 123.62 ಡಾಲರ್‌ಗೆ ತಲುಪಿದೆ. ಆರ್‌ಬಿಐ ರೆಪೊ ದರ ಜಾಸ್ತಿ ಮಾಡಿರುವುದು ಹಾಗೂ ವಿದೇಶಿ ಹೂಡಿಕೆದಾರರು ಹಣ ಹಿಂದಕ್ಕೆ ಪಡೆಯುತ್ತಿರುವುದು ಮುಂದಿನ ವಾರಗಳಲ್ಲಿ ಷೇರು ಮಾರುಕಟ್ಟೆಗಳ ಮೇಲೆ ನಕಾರಾತ್ಮಕ ಪರಿಣಾಮ ಉಂಟುಮಾಡುವ ಸಾಧ್ಯತೆ ಇದೆ ಎಂದು ಹೇಳಲಾಗಿದೆ.

# ರೆಪೊ ದರ ಮತ್ತೆ ಶೇ.0.50 ಹೆಚ್ಚಳ : ಆರ್‌ಬಿಐ ಗವರ್ನರ್ ಶಕ್ತಿಕಾಂತ ದಾಸ್ ಘೋಷಣೆ




**ಮುಂಬೈ :** ಹೆಚ್ಚುತ್ತಿರುವ ಹಣದುಬ್ಬರ ನಿಯಂತ್ರಿಸುವ ಉದ್ದೇಶದೊಂದಿಗೆ ಭಾರತೀಯ ರಿಸರ್ವ್ ಬ್ಯಾಂಕ್ ಮತ್ತೊಮ್ಮೆ ರೆಪೊ ದರ ಹೆಚ್ಚಳ ಮಾಡಿದೆ. ಆರ್‌ಬಿಐ ಗವರ್ನರ್ ಶಕ್ತಿಕಾಂತ ದಾಸ್ ಬುಧವಾರ ಹಣಕಾಸು ನೀತಿ ಬಿಡುಗಡೆ ಮಾಡಿದರು.

ರೆಪೊ ದರವನ್ನು ಶೇ.0.50ರಷ್ಟು ಹೆಚ್ಚಿಸುತ್ತಿರುವುದಾಗಿ ಘೋಷಿಸಿದರು. ಇದರೊಂದಿಗೆ ಪರಿಷ್ಕೃತ ರೆಪೊ ದರ ಈಗ ಶೇ.4.90 ಆಗಿದೆ.

ಪ್ರಸಕ್ತ ಹಣಕಾಸು ವರ್ಷದ ಮೊದಲ ಮೂರು ತ್ರೈಮಾಸಿಕದಲ್ಲಿ ಹಣದುಬ್ಬರ ಪ್ರಮಾಣ ಶೇ.6ರ ಮೇಲಿರಲಿದೆ ಎಂದು ಶಕ್ತಿಕಾಂತ ದಾಸ್ ಹೇಳಿದರು. ಹಣದುಬ್ಬರ ನಿಯಂತ್ರಿಸುವ ಉದ್ದೇಶದಿಂದ ಆರ್‌ಬಿಐ ಮೇ 4ರಂದು ರೆಪೊ ದರವನ್ನು ಶೇ.0.40ರಷ್ಟು ಹೆಚ್ಚಿಸಿತ್ತು.

ಗವರ್ನರ್ ಶಕ್ತಿಕಾಂತ ದಾಸ್ ನೇತೃತ್ವದಲ್ಲಿ ಆರು ಮಂದಿ ಸದಸ್ಯರ ಹಣಕಾಸು ನೀತಿ ಸಮಿತಿ (ಎಂಪಿಸಿ) ಸಭೆ ನಡೆಸಿತ್ತು. ರೆಪೊ ದರ ಹೆಚ್ಚಿಸುವ ಬಗ್ಗೆ ಈ ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನ ಕೈಗೊಳ್ಳಲಾಗಿದೆ.

ಪ್ರಸಕ್ತ ಹಣಕಾಸು ವರ್ಷದ ಆರ್ಥಿಕ ವೃದ್ಧಿ ದರ ಶೇ.7.2ರಷ್ಟು ಇರಲಿದೆ ಎಂದು ಆರ್‌ಬಿಐ ಅಂದಾಜಿಸಿದೆ. ರಾಜ್ಯಗಳು ಮೋಟಾರು ಇಂಧನದ ಮೇಲಿನ ವ್ಯಾಟ್ ತೆರಿಗೆಯನ್ನು ಇನ್ನಷ್ಟು ಕಡಿತಗೊಳಿಸುವುದರಿಂದ ಹಣದುಬ್ಬರ ಪ್ರಮಾಣ ತುಸು ಕಡಿಮೆಯಾಗಲಿದೆ ಎಂದು ಶಕ್ತಿಕಾಂತ ದಾಸ್ ಹೇಳಿದರು. 23ನೇ ಹಣಕಾಸು ವರ್ಷದ ಹಣದುಬ್ಬರ ಪ್ರಮಾಣ ಶೇ.5.7ರಷ್ಟು ಇರಬಹುದು ಎಂದು ಈ ಹಿಂದೆ ಅಂದಾಜಿಸಲಾಗಿತ್ತು. ಆದರೆ ಅದು ಶೇ.6.7ರಷ್ಟು ಇರಲಿದೆ ಎಂದು ಆರ್‌ಬಿಐ ಹಣಕಾಸು ನೀತಿಯಲ್ಲಿ ಉಲ್ಲೇಖಿಸಲಾಗಿದೆ.

## ನಾರಾಯಣ ಗುರು ಬ್ಯಾಂಕ ಅ., ಉಡುಪಿ : ಅಧ್ಯಕ್ಷರಾಗಿ ಹರಿಶ್ಚಂದ್ರ ಅಮೀನ್



**ಉಡುಪಿ** : ರಾಷ್ಟ್ರೀಯ ಬಿಲ್ಲವ ಮಹಾಮಂಡಲ ಪ್ರಾಯೋಜಿತ ನಾರಾಯಣ ಗುರು ಅರ್ಬನ್ ಕೋ–ಆಪರೇಟಿವ್ ಬ್ಯಾಂಕಿನ ಮುಂದಿನ ಐದು ವರ್ಷಗಳ ಅವಧಿಗೆ ಅಧ್ಯಕ್ಷರಾಗಿ ಕಟಪಾಡಿಯ ಉದ್ಯಮಿ, ಜೆಸಿಐ ಇಂಡಿಯಾದ ಪೂರ್ವ ವಲಯಾಧ್ಯಕ್ಷ, ಕಟಪಾಡಿ ವಿಶ್ವನಾಥ ಕ್ಷೇತ್ರದ ಮಾಜಿ ಗೌರವ ಪ್ರಧಾನ ಕಾರ್ಯದರ್ಶಿಯಾಗಿ ಕ್ಷೇತ್ರದ ನವೀಕರಣದ ರೂವಾರಿ ಎನಿಸಿಕೊಂಡ,ಇತ್ತೀಚೆಗೆ ಜೀರ್ಣೋದ್ಧಾರಗೊಂಡ ಏಣಗುಡ್ಡೆ ಬ್ರಹ್ಮ ಬೈದೆರುಗಳ ಗರಡಿಯ ಜೀರ್ಣೋದ್ಧಾರ ಸಮಿತಿಯ ಪ್ರಧಾನ ಕಾರ್ಯದರ್ಶಿ ಹರಿಶ್ಚಂದ್ರ ಅಮೀನ್ ಪುನರಾಯ್ಕೆಯಾಗಿದ್ದಾರೆ. ಇತ್ತೀಚೆಗೆ ಉಡುಪಿ ಬನ್ನಂಜೆಯಲ್ಲಿರುವ ಬ್ಯಾಂಕಿನ ಕೇಂದ್ರ ಕಛೇರಿಯಲ್ಲಿ ಜರುಗಿದ ಚುನಾವಣೆಯಲ್ಲಿ ಈ ಕೆಳಗಿನವರು ಅವಿರೋಧವಾಗಿ ಆಯ್ಕೆಯಾಗಿರುತ್ತಾರೆ.

ಉಪಾಧ್ಯಕ್ಷರಾಗಿ : ವಿಜಯಾ ಜಿ ಬಂಗೇರ, ನಿರ್ದೇಶಕರುಗಳಾಗಿ : ಶಿವಾಜಿ ಸುವರ್ಣ ಬೆಳ್ಳೆ, ಕೆ ಜಯ ಕುಮಾರ್ ಬ್ರಹ್ಮಗಿರಿ, ಡಿ ಆರ್ ರಾಜು ಕಾರ್ಕಳ, ಪ್ರಭಾಕರ ಬಂಗೇರ ಕಾರ್ಕಳ, ನವೀನ್ ಅಮೀನ್ ಶಂಕರಪುರ, ಜಯ ಕುಮಾರ್ ಪರ್ಕಳ, ಅಶೋಕ್ ಕುಮಾರ್ ಮಲ್ಪೆ, ಬಸವರಾಜ್ ಬಿ ಪೂಜಾರಿ ಮಲ್ಪೆ, ಯು ಆನಂದ್ ಜತ್ತನ್ ಉಡುಪಿ, ಶಕುಂತಲಾ ಶ್ರೀನಿವಾಸ್ ಮಣಿಪಾಲ, ಸತೀಶ್ ಕೊಪ್ಪ, ಶೇಖರ್ ಬಿ ಪೂಜಾರಿ ಕುಂಜಿಬೆಟ್ಟು, ರಮೇಶ್ ಕೆ ಪೂಜಾರಿ ಕಟಪಾಡಿ, ಅರುಣ್ ಜತ್ತನ್ ಬೈಲಕೆರೆ. ಚುನಾವಣಾ ನಿರ್ವಚನಾಧಿಕಾರಿಯಾಗಿ ಜಿಲ್ಲಾ ಸಹಕಾರಿ ಉಪನಿಬಂಧಕರ ಕಚೇರಿಯ ರೋಹಿತ್ ಕೆ.ಆರ್. ಹಾಗೂ ಬ್ಯಾಂಕಿನ ಮುಖ್ಯ ಕಾರ್ಯನಿರ್ವಹಣಾಧಿಕಾರಿ ರೋಶನ್ ಸಹಕರಿಸಿದರು. ರಾಷ್ಟ್ರೀಯ ಬಿಲ್ಲವರ ಮಹಾಮಂಡಳದ ಅಧ್ಯಕ್ಷ ಡಾ ರಾಜಶೇಖರ್ ಕೋಟ್ಯಾನ್ ಹಿರಿಯರಾದ ಎಸ್ ಕೆ ಸಾಲ್ಯಾನ್, ಸೂರ್ಯ ಪ್ರಕಾಶ್ ಹಾಗೂ ರಾಮಚಂದ್ರ ಕಿದಿಯೂರು ಮಾರ್ಗದರ್ಶನ ನೀಡಿದರು.

## ಉಡುಪಿ ಕೋ–ಆಪರೇಟಿವ್ ಟೌನ್ ಬ್ಯಾಂಕ್ ಲಿ. ಶಾಖಾ ವ್ಯವಸ್ಥಾಪಕರ ಬೀಳ್ಕೊಡುಗೆ ಸಮಾರಂಭ

**ಉಡುಪಿ :** ಉಡುಪಿ ಕೋ–ಆಪರೇಟಿವ್ ಟೌನ್ ಬ್ಯಾಂಕ್‌ನಲ್ಲಿ 33 ವರ್ಷ ಸೇವೆ ಸಲ್ಲಿಸಿದ ಶ್ರೀ ಸಿ. ಪ್ರಕಾಶ್‌ರವರು ಇತ್ತೀಚೆಗೆ ಶಾಖಾ ವ್ಯವಸ್ಥಾಪಕರಾಗಿ ನಿವೃತ್ತಿಗೊಂಡ ಸಂದರ್ಭದಲ್ಲಿ ಬೀಳ್ಕೊಡುಗೆ ಸಮಾರಂಭವನ್ನು ಆಯೋಜಿಸಲಾಯಿತು. ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಎಚ್. ಜಯಪ್ರಕಾಶ್ ಕೆದ್ಲಾಯರವರು ಶ್ರೀ ಸಿ. ಪ್ರಕಾಶ್ ಹಾಗೂ ಶ್ರೀಮತಿ ಚಿತ್ರಲೇಖ ದಂಪತಿಗಳನ್ನು ಸನ್ಮಾನಿಸಿದರು. ಉಪಾಧ್ಯಕ್ಷರಾದ ಶ್ರೀ ಪಿ. ರಾಘವೇಂದ್ರ ಭಟ್, ನಿರ್ದೇಶಕರಾದ ಶ್ರೀ ಭಾಸ್ಕರ್ ರಾವ್ ಕಿದಿಯೂರು, ಶ್ರೀ ಎನ್. ಸೂರ್ಯಪ್ರಕಾಶ್ ರಾವ್, ಶ್ರೀ ಎನ್. ಪ್ರಹ್ಲಾದ್ ಬಲ್ಲಾಳ್, ಶ್ರೀಮತಿ ಮನೋರಮಾ ಎಸ್., ಬ್ಯಾಂಕಿನ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಶ್ರೀ ಎಸ್. ಕುಮಾರಸ್ವಾಮಿ ಉಡುಪ, ಸಹಾಯಕ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಶ್ರೀ ಪಿ. ವಿಷ್ಣುಮೂರ್ತಿ ಆಚಾರ್ಯ, ಶಾಖಾ ವ್ಯವಸ್ಥಾಪಕರಾದ ಶ್ರೀ ಎ. ರಾಘವೇಂದ್ರ ಹೆಬ್ಬಾರ್ ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.



## ಪಟ್ಟಣ ಸಹಕಾರ ಬ್ಯಾಂಕುಗಳ ಅಧಿಕಾರಿ ವರ್ಗದವರಿಗೆ ಐದು ದಿನಗಳ ನಿರ್ವಹಣೆ ಅಭಿವೃದ್ಧಿ ತರಬೇತಿ (Management Development Programme)ಯನ್ನು ಏರ್ಪಡಿಸಿರುವ ಕುರಿತು

**ಬೆಂಗಳೂರು** : ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳ ಮತ್ತು ಪ್ರಾದೇಶಿಕ ಸಹಕಾರ ನಿರ್ವಹಣಾ ಸಂಸ್ಥೆ (ಆರ್.ಐ.ಸಿ.ಎಂ) ಯ ಜಂಟಿ ಸಹಯೋಗದೊಂದಿಗೆ ಪಟ್ಟಣ ಸಹಕಾರ ಬ್ಯಾಂಕುಗಳ ಅಧಿಕಾರಿಗಳಿಗೆ ಪೂರ್ಣ ಪ್ರಮಾಣದಲ್ಲಿ ಐದು ದಿನಗಳ ಉನ್ನತ ಮಟ್ಟದ "ನಿರ್ವಹಣೆ ಅಭಿವೃದ್ಧಿ ತರಬೇತಿ" (Management Development Programme) ಯನ್ನು ಪ್ರಾರಂಭಿಸಲಾಗಿದೆ. ಇತ್ತೀಚೆಗೆ ಬ್ಯಾಂಕಿಂಗ್ ಕ್ಷೇತ್ರದಲ್ಲಿ ಅನೇಕ ಬದಲಾವಣೆಗಳು ಆಗುತ್ತಿದ್ದು, ಅವುಗಳನ್ನು ಸಮರ್ಥವಾಗಿ ನಿರ್ವಹಿಸಲು ಈ ದೀರ್ಘಾವಧಿಯ ತರಬೇತಿಯನ್ನು ಏರ್ಪಡಿಸಲಾಗಿದೆ. ಈ ಸದರಿ ತರಬೇತಿಯನ್ನು ದಿನಾಂಕ : 20.06.2022 ರಂದು ಬೆಳಿಗ್ಗೆ 09.00 ಗಂಟೆಯಿಂದ ದಿನಾಂಕ : 24.06.2022ರ ಸಾಯಂಕಾಲ 05.30 ಗಂಟೆಯವರೆಗೆ ಒಟ್ಟು ಐದು ದಿನಗಳ ಕಾಲ ಪ್ರಾದೇಶಿಕ ಸಹಕಾರ ನಿರ್ವಹಣಾ ಸಂಸ್ಥೆ (ಆರ್ಐಸಿಎಂ) ನಂ.67, ಪದ್ಮನಾಭನಗರ, ಬನಶಂಕರಿ 2ನೇ ಹಂತ, ಬೆಂಗಳೂರು–560 070 ಇಲ್ಲಿ ಏರ್ಪಡಿಸಲಾಗಿದೆ.

ಈ ತರಬೇತಿ ಶಿಬಿರದಲ್ಲಿ ಊಟ–ತಿಂಡಿ, ವಸತಿ ಸೌಕರ್ಯ ಮತ್ತು ಉಪನ್ಯಾಸಕರ ವ್ಯವಸ್ಥೆ, ಹಿನ್ನೆಲೆಯ ಪತ್ರ, ತರಬೇತಿ ಪ್ರಮಾಣಪತ್ರ ಇತ್ಯಾದಿಗಳು ಒಳಗೊಂಡಿರುತ್ತದೆ. ಈ ಸದರಿ ತರಬೇತಿ ಶಿಬಿರಕ್ಕೆ ಪ್ರತಿನಿಧಿ ಶುಲ್ಕ ನಿಗದಿಪಡಿಸಲಾಗಿದೆ. ಪ್ರತಿ ಪ್ರತಿನಿಧಿಗೆ ರೂ.5,000/–ಗಳು ಮತ್ತು ಜಿಎಸ್‌ಟಿ ತೆರಿಗೆ 18% ಸೇರಿಸಿ ಒಟ್ಟು ರೂ.5,900/–ಗಳನ್ನು ಬೆಂಗಳೂರಿನಲ್ಲಿ ಪಾವತಿಯಾಗುವಂತೆ ಚೆಕ್ / ಡಿಡಿ ಅಥವಾ ಎನ್‌ಇಎಫ್‌ಟಿ ಮುಖಾಂತರ ದಿನಾಂಕ : 15.06.2022ರೊಳಗಾಗಿ ಮಹಾಮಂಡಳದಲ್ಲಿ ನೋಂದಾಯಿಸಿಕೊಳ್ಳಲು ಕೋರಲಾಗಿದೆ.

ಈ ಐದು ದಿನಗಳ ತರಬೇತಿ ಶಿಬಿರದಲ್ಲಿ ನುರಿತ ಬ್ಯಾಂಕಿಂಗ್ ತಜ್ಞರುಗಳಿಂದ ಉಪನ್ಯಾಸ ನೀಡಲಾಗುವುದು. ನೋಂದಾಯಿಸಿದ ಪ್ರತಿನಿಧಿಗಳಿಗೆ ಮಾತ್ರ ಅವಕಾಶವಿರುತ್ತದೆ.

ಈ ತರಬೇತಿ ಶಿಬಿರದಲ್ಲಿ ಸದರಿ ತರಬೇತಿಗೆ ನೋಂದಾಯಿಸಿದ ಪ್ರತಿನಿಧಿಗಳು ಭಾಗವಹಿಸಿ, ಇದರ ಸದುಪಯೋಗವನ್ನು ಪಡೆದುಕೊಳ್ಳಬೇಕೆಂದು ಮಹಾಮಂಡಳದ ಮುಖ್ಯಕಾರ್ಯನಿರ್ವಹಣಾಧಿಕಾರಿ ಶ್ರೀ ಪುಂಡಲೀಕ ಎನ್. ಕೇರೂರೆ ಯವರು ತಿಳಿಸಿರುತ್ತಾರೆ.

## ದಿನಾಂಕ : 25.06.2022 ರಂದು ಪಟ್ಟಣ ಸಹಕಾರ ಬ್ಯಾಂಕುಗಳ ಅಧ್ಯಕ್ಷರು / ಉಪಾಧ್ಯಕ್ಷರು ಮತ್ತು ಮುಖ್ಯಕಾರ್ಯನಿರ್ವಹಣಾಧಿಕಾರಿ ಹಾಗೂ ಅಧಿಕಾರಿಗಳಿಗೆ ಒಂದು ದಿನದ ರಾಜ್ಯಮಟ್ಟದ ವಿಚಾರ ಸಂಕಿರಣ

**ಬೆಂಗಳೂರು** : ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳ ಮತ್ತು ಎಸ್‌ಟಿಸಿಐ ಪ್ರೈಮರಿ ಡೀಲರ್ ಲಿ., ಇವರ ಸಹಯೋಗದೊಂದಿಗೆ ದಿನಾಂಕ : 25ನೇ ಜೂನ್ 2022ರ ಶನಿವಾರದಂದು ಪಟ್ಟಣ ಸಹಕಾರ ಬ್ಯಾಂಕುಗಳ ಅಧ್ಯಕ್ಷರು / ಉಪಾಧ್ಯಕ್ಷರು ಮತ್ತು ಮುಖ್ಯಕಾರ್ಯನಿರ್ವಹಣಾಧಿಕಾರಿ ಹಾಗೂ ಅಧಿಕಾರಿಗಳಿಗೆ ಒಂದು ದಿನದ ರಾಜ್ಯಮಟ್ಟದ ವಿಚಾರ ಸಂಕಿರಣವನ್ನು ಮಹಾಮಂಡಳದ ಕೆ.ಎಚ್. ಪಾಟೀಲ ಸಭಾಂಗಣ, ನಂ.132, ಕೆ.ಎಚ್.ರಸ್ತೆ, ಬೆಂಗಳೂರು–560027 ಇಲ್ಲಿ ಏರ್ಪಡಿಸಲಾಗಿದೆ.

ಈ ವಿಚಾರ ಸಂಕಿರಣದಲ್ಲಿ Fixed Income Markets in India-Current Trends, Themes & Perspectives. Investment Management. Credit Management. Recent RBI Issues ವಿಷಯಗಳ ಕುರಿತು ನುರಿತ ತಜ್ಞರುಗಳಿಂದ ಉಪನ್ಯಾಸ ನೀಡಲಾಗುವುದು. ಈ ವಿಚಾರ ಸಂಕಿರಣದಲ್ಲಿ ಒಂದು ಬ್ಯಾಂಕಿನಿಂದ ಗರಿಷ್ಠ 3 ಜನರು ಭಾಗವಹಿಸಬಹುದಾಗಿದೆ. ಭಾಗವಹಿಸುವ ಪ್ರತಿನಿಧಿಗಳು ದಿನಾಂಕ:22.06.2022ರೊಳಗಾಗಿ ಕಡ್ಡಾಯವಾಗಿ ನೋಂದಾಯಿಸಿಕೊಳ್ಳುವಂತೆ ಮಹಾಮಂಡಳದ ಮುಖ್ಯಕಾರ್ಯನಿರ್ವಹಣಾಧಿಕಾರಿ ಶ್ರೀ ಪುಂಡಲೀಕ ಎನ್. ಕೇರೂರೆ ತಿಳಿಸಿರುತ್ತಾರೆ.

## ಸಾಲ ಕೊಡುವ ಆ್ಯಪ್ : ಶೀಘ್ರವೇ ನಿಯಮ




**ಮುಂಬೈ** : ಡಿಜಿಟಲ್ ವೇದಿಕೆಗಳ ಮೂಲಕ ಸಾಲ ವಿತರಣೆ ಮಾಡುವ ಕಂಪನಿಗಳಿಗೆ ಸಂಬಂಧಿಸಿದ ನಿಯಮಗಳನ್ನು ಶೀಘ್ರವೇ ಅಂತಿಮಗೊಳಿಸಲಾಗುವುದು ಎಂದು ಭಾರತೀಯ ರಿಜರ್ವ್ ಬ್ಯಾಂಕ್‌ನ (ಆರ್‌ಬಿಐ) ಗವರ್ನರ್ ಶಕ್ತಿಕಾಂತ ದಾಸ್ ಹೇಳಿದ್ದಾರೆ.

ಡಿಜಿಟಲ್ ವೇದಿಕೆ ಆ್ಯಪ್ ಮೂಲಕ ಸಾಲ ನೀಡಿದವರು ಕಿರುಕುಳ ಕೊಟ್ಟ ಕಾರಣಕ್ಕೆ ಸಾಲ ಪಡೆದವರು ಆತ್ಮಹತ್ಯೆ ಮಾಡಿಕೊಂಡ ಪ್ರಕರಣಗಳು ವರದಿಯಾಗಿವೆ. ವಿಸ್ತೃತವಾದ ನಿಯಮಗಳನ್ನು ನಾವು ಶೀಘ್ರದಲ್ಲಿಯೇ ಅಂತಿಮಗೊಳಿಸಲಿದ್ದೇವೆ. ಇವು ಸಾಲ ಕೊಡುವ ಡಿಜಿಟಲ್ ವೇದಿಕೆಗಳು ಅಕ್ರಮವಾಗಿವೆ' ಎಂದು ದಾಸ್ ಅವರು ಉಪನ್ಯಾಸವೊಂದರಲ್ಲಿ ಹೇಳಿದ್ದಾರೆ.

ಡಿಜಿಟಲ್ ವೇದಿಕೆಗಳ ಮೂಲಕ ಸಾಲ ಪಡೆದವರು ಸಮಸ್ಯೆ ಎದುರಾದಲ್ಲಿ ಸ್ಥಳೀಯ ಪೋಲಿಸರನ್ನು ಸಂಪರ್ಕಿಸಬೇಕು ಎಂದು ದಾಸ್ ಅವರು ಬುಧವಾರ ಸಲಹೆ ಮಾಡಿದ್ದರು. ಸಾಲ ಒದಗಿಸುವ ಬಹುತೇಕ ಡಿಜಿಟಲ್ ಆ್ಯಪ್‌ಗಳಿಗೆ ಆರ್‌ಬಿಐ ಅನುಮತಿ ಇಲ್ಲ. ಅವು ತಮ್ಮಷ್ಟಕ್ಕೆ ತಾವು ಕಾರ್ಯನಿರ್ವಹಿಸುತ್ತಿವೆ ಎಂದು ದಾಸ್ ತಿಳಿಸಿದ್ದರು. ಸಾಲ ಕೊಡುವ ಆ್ಯಪ್ ಆರ್‌ಬಿಐನಲ್ಲಿ ನೋಂದಣಿ ಮಾಡಿಕೊಂಡಿದೆಯೇ ಎಂಬುದನ್ನು ಪರಿಶೀಲಿಸಿ. ಅದು ನೋಂದಣಿ ಆಗಿದೆ ಎಂದಾದರೆ, ಅದು ತಪ್ಪು ಮಾಡಿದಾಗ ಆರ್‌ಬಿಐ ಕ್ರಮ ಜರುಗಿಸುತ್ತದೆ. ಈ ಭರವಸೆಯನ್ನು ನಾನು ನೀಡುತ್ತೇನೆ ಎಂದು ಕೂಡ ದಾಸ್ ಅವರು ಹೇಳಿದ್ದರು.

## ಮತ್ತೆ ರೆಪೊ ದರ 0.50% ಏರಿಕೆ, ಮತ್ತಷ್ಟು ಏರಲಿದೆ ಇಎಂಐ, ಯಾವ ಸಾಲಕ್ಕೆ ಎಷ್ಟು ಹೆಚ್ಚಳ?

**ಬೆಂಗಳೂರು :** ನಿರೀಕ್ಷೆಯಂತೆಯೇ ರಿಸರ್ವ್ ಬ್ಯಾಂಕ್ (ಆರ್‌ಬಿಐ) ರೆಪೊ ದರವನ್ನು ಬುಧವಾರ ಶೇ.0.50ರಷ್ಟು ಏರಿಕೆ ಮಾಡಿದೆ. ಕಳೆದ ಮೇನಲ್ಲಿನ ಏರಿಕೆಯೂ ಸೇರಿದಂತೆ ಕಳೆದ 36 ದಿನಗಳಲ್ಲಿ ರೆಪೊ ದರ ಶೇ.0.90 ಹೆಚ್ಚಳವಾಗಿದ್ದು, ಶೇ.4.90ಕ್ಕೆ ತಲುಪಿದೆ. ಇದರ ಪರಿಣಾಮ ಬ್ಯಾಂಕ್‌ಗಳು, ಹಣಕಾಸು ಸಂಸ್ಥೆಗಳು ಗೃಹ, ವಾಹನ ಮತ್ತು ಇತರ ಸಾಲಗಳ ಮೇಲಿನ ಬಡ್ಡಿ ದರವನ್ನು ಇನ್ನಷ್ಟು ಏರಿಕೆ ಮಾಡಲಿವೆ.

ಮೇನಲ್ಲಿ ದಿಢೀರ್ ಆಗಿ ರೆಪೊ ದರವನ್ನು ಹೆಚ್ಚಿಸಿದ್ದ ಪರಿಣಾಮ, ಎಸ್‌ಬಿಐ, ಐಡಿಬಿಐ, ಎಚ್‌ಡಿಎಫ್‌ಸಿ ಸೇರಿದಂತೆ ಬಹುತೇಕ ಬ್ಯಾಂಕ್‌ಗಳು ಸಾಲಗಳ ಮೇಲಿನ ಬಡ್ಡಿ ದರವನ್ನು ಈಗಾಗಲೇ ಏರಿಕೆ ಮಾಡಿವೆ. ಸದ್ಯದಲ್ಲಿಯೇ ಎರಡನೇ ಬಾರಿ ಬಡ್ಡಿ ದರವನ್ನು ಬ್ಯಾಂಕ್‌ಗಳು ಇನ್ನಷ್ಟು ಹೆಚ್ಚಿಸುವ ಎಲ್ಲಾ ಸಾಧ್ಯತೆಗಳೂ ಇವೆ. ಬ್ಯಾಂಕ್‌ಗಳಲ್ಲಿ ಸಾಲ ಮಾಡಿರುವ ಮಂದಿಗೆ ಮತ್ತು ಭವಿಷ್ಯದಲ್ಲಿ ಸಾಲ ಮಾಡುವವರಿಗೆ ಇಎಂಐ ಭಾರ ಹೆಚ್ಚಲಿದೆ.

**ಹೋಮ್‌ಲೋನ್ :** ನೀವು 30 ಲಕ್ಷ ರೂ. ಗೃಹ ಸಾಲ ಪಡೆದುಕೊಂಡಿದ್ದು, 20 ವರ್ಷಗಳ ಅವಧಿಯ ಈ ಸಾಲಕ್ಕೆ ಶೇ.7ರಷ್ಟು ವಾರ್ಷಿಕ ಬಡ್ಡಿ ಇದ್ದರೆ, ರೆಪೊ ದರ ಹೆಚ್ಚಳದ ಪರಿಣಾಮ ಬಡ್ಡಿಯು ಶೇ.7.90ಕ್ಕೆ ಏರಿಕೆಯಾಗಬಹುದು. ಇದರಿಂದ ಇಎಂಐ 1,648 ರೂ. ಏರಿಕೆಯಾಗಲಿದೆ. ಅಂದರೆ ಈಗ, 23,259 ರೂ. ಇಎಂಐ ಕಟ್ಟುತ್ತಿದ್ದರೆ, ಅದು 24,907 ರೂ.ಗೆ ಏರಿಕೆಯಾಗಲಿದೆ.

**ವಾಹನ ಸಾಲ :** ಕಾರ್ ಲೋನ್ 8 ಲಕ್ಷ ರೂ. ಪಡೆದಿದ್ದರೆ, 7 ವರ್ಷಗಳ ಅವಧಿಗೆ ಬಡ್ಡಿದರ ಶೇ. 10ರಿಂದ ಶೇ. 10.9ಕ್ಕೆ ಏರಲಿದೆ. ಇದರ ಜತೆಗೆ 'ಇಎಂಐ' ಕೂಡಾ 375 ರೂ. ಹೆಚ್ಚಳವಾಗಲಿದ್ದು, ಈಗಿನ 13,281 ರೂ. ನಿಂದ 13,656 ರೂ.ಗೆ ಜಿಗಿಯಲಿದೆ.

**ಪರ್ಸನಲ್ ಲೋನ್ :** ವೈಯಕ್ತಿಕ ಸಾಲವಾಗಿ ನೀವು 5 ಲಕ್ಷ ರೂ. ಪಡೆದಿದ್ದರೆ 5 ವರ್ಷಗಳ ಅವಧಿಗೆ ಬಡ್ಡಿದರ ಶೇ.14 ರಿಂದ ಶೇ. 14.9ಕ್ಕೆ ಜಿಗಿಯಲಿದೆ. ಇಎಂಐ 235 ರೂ. ಅಧಿಕವಾಗಲಿದ್ದು, 11,634 ರೂ.ನಿಂದ 11,869 ರೂ.ಗೆ ಏರಿಕೆಯಾಗಲಿದೆ.

**ಲಕ್ಷಕ್ಕೆ 55 ರೂ. ಏರಿಕೆ :** ಸದ್ಯದ ರೆಪೊ ದರಕ್ಕೆ ತಕ್ಕಂತೆ ಬ್ಯಾಂಕ್ ಬಡ್ಡಿ ದರ ಏರಿದರೆ, ಒಂದು ಲಕ್ಷ ರೂ. ಸಾಲದ ಮೊತ್ತಕ್ಕೆ ಇಎಂಐ 55 ರೂ. ಏರಿಕೆಯಾಗಲಿದೆ.

**ಉಳಿತಾಯಕ್ಕೆ ಸಕಾಲ :** ರೆಪೊ ದರ ಏರಿಕೆಯಾದರೆ ಎಫ್‌ಡಿ, ಆರ್‌ಡಿ ಸೇರಿದಂತೆ ಸಣ್ಣ ಉಳಿತಾಯ ಯೋಜನೆಗಳ ಮೇಲಿನ ಬಡ್ಡಿ ದರವೂ ಹೆಚ್ಚಳವಾಗಲಿದೆ. ನಿಶ್ಚಿತ ಠೇವಣಿ ಬಡ್ಡಿಯನ್ನೇ ನೆಚ್ಚಿಕೊಂಡಿರುವ ಹಿರಿಯ ನಾಗರಿಕರು, ಸಾಂಪ್ರದಾಯಿಕ ಹೂಡಿಕೆದಾರರ ಬಡ್ಡಿ ಆದಾಯ ವೃದ್ಧಿಯಾಗಲಿದೆ.

## ಚಿಲ್ಲರೆ ಹಣದುಬ್ಬರ ಶೇ.6.7ಕ್ಕೆ ಏರಿಕೆ : ಆರ್‌ಬಿಐ ಗವರ್ನರ್ ಶಕ್ತಿಕಾಂತ್ ದಾಸ್

**ಮುಂಬೈ :** ಪ್ರಸಕ್ತ ಹಣಕಾಸು ವರ್ಷಕ್ಕೆ ಸಂಬಂಧಿಸಿದಂತೆ ಚಿಲ್ಲರೆ ಹಣದುಬ್ಬರ ಪ್ರಮಾಣವನ್ನು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಪರಿಷ್ಕರಿಸಿದೆ. ಹಣದುಬ್ಬರ ದರವು ಶೇ.6.7ಕ್ಕೆ ಏರಲಿದೆ ಎಂದು ಆರ್‌ಬಿಐ ಗವರ್ನರ್ ಶಕ್ತಿಕಾಂತ ದಾಸ್ ಹೇಳಿದ್ದಾರೆ.

ಏಪ್ರಿಲ್‌ನಲ್ಲಿ ನಡೆದ ಆರ್‌ಬಿಐನ ಹಣಕಾಸು ನೀತಿ ಸಮಿತಿಯ (ಎಂಪಿಸಿ) ಸಭೆಯು, ಚಿಲ್ಲರೆ ಹಣದುಬ್ಬರವು ಶೇ.5.7ರಷ್ಟು ಆಗುವ ಅಂದಾಜು ಮಾಡಲಾಗಿತ್ತು. 'ರಷ್ಯಾ–ಉಕ್ರೇನ್ ಸಂಘರ್ಷದಿಂದಾಗಿ ಹಣದುಬ್ಬರವು ಜಾಗತಿಕವಾಗಿ ವ್ಯಾಪಿಸಿದ್ದು, ಇದರಿಂದಾಗಿ ಹೊಸ ಸವಾಲುಗಳು ಎದುರಾಗುತ್ತಿವೆ. ಹೀಗಾಗಿ ಹಣದುಬ್ಬರದ ಅಂದಾಜನ್ನು ಶೇ.6.7ಕ್ಕೆ ಹೆಚ್ಚಿಸಲಾಗಿದೆ' ಎಂದು ಅವರು ತಿಳಿಸಿದ್ದಾರೆ.

ಚಿಲ್ಲರೆ ಹಣದುಬ್ಬರ ದರವು ಶೇ.6ನ್ನು ಮೀರದೆ ಇರುವಂತೆ ನೋಡಿಕೊಳ್ಳುವ ಜವಾಬ್ದಾರಿ ಆರ್‌ಬಿಐ ಮೇಲಿದೆ. ಆದರೆ, ಕಳೆದ ನಾಲ್ಕು ತಿಂಗಳಿನಿಂದ ಅದು ಶೇ.6ಕ್ಕಿಂತ ಹೆಚ್ಚಿಗೆ ಇದೆ. ಏಪ್ರಿಲ್‌ನಲ್ಲಿ ಶೇ.7.8ಕ್ಕೆ ಏರಿಕೆ ಆಗಿದೆ. ರಷ್ಯಾ–ಉಕ್ರೇನ್ ಸಂಘರ್ಷವು ಹೊಸ ಸವಾಲುಗಳನ್ನು ಮುಂದಿಟ್ಟಿದೆ. ಪೂರೈಕೆ ವ್ಯವಸ್ಥೆಯಲ್ಲಿನ ಸಮಸ್ಯೆಗಳು ಇನ್ನಷ್ಟು ಹೆಚ್ಚಾಗುವಂತೆ ಮಾಡಿದೆ. ಹೀಗಾಗಿ ಜಾಗತಿಕ ಮಟ್ಟದಲ್ಲಿ ಆಹಾರ, ಇಂಧನ ಮತ್ತು ಸರಕುಗಳ ಬೆಲೆ ಹೆಚ್ಚಾಗುವಂತೆ ಆಗಿದೆ. 2022ರಲ್ಲಿ ಮುಂಗಾರು ವಾಡಿಕೆಯಂತೆ ಇರುವ ಹಾಗೂ ಭಾರತವು ಖರೀದಿಸುವ ಕಚ್ಚಾ ತೈಲದ ಸರಾಸರಿ ಬೆಲೆಯು ಬ್ಯಾರಲ್‌ಗೆ 105 ಡಾಲರ್ ಇರುವ ಅಂದಾಜನ್ನು ಇಟ್ಟುಕೊಂಡು ಚಿಲ್ಲರೆ ಹಣದುಬ್ಬರವು ಶೇ.6.7ರಷ್ಟು ಇರುವ ಅಂದಾಜು ಮಾಡಲಾಗಿದೆ' ಎಂದು ಗವರ್ನರ್ ಹೇಳಿದ್ದಾರೆ.




**ಸವಾಲುಗಳು :**

- ಗರಿಷ್ಠ ಮಟ್ಟದಲ್ಲಿ ಸರಕುಗಳ ದರ
- ಹಲವು ರಾಜ್ಯಗಳಿಂದ ವಿದ್ಯುತ್ ದರ ಪರಿಷ್ಕರಣೆ
- ಪೂರೈಕೆ ವ್ಯವಸ್ಥೆಯಲ್ಲಿ ಅಡಚಣೆಗಳು
- ಕೋಳಿ ಮತ್ತು ಪಶು ಆಹಾರ ದುಬಾರಿ.

# ನಿಮ್ಮ ಪ್ರಶ್ನೆ ನಮ್ಮ ಉತ್ತರ






▸▸ **ಸುಧಾಕರ್ ಭಟ್,** ಬ್ಯಾಂಕಿಂಗ್ ಸಲಹೆಗಾರರು.

**01. ನಮ್ಮ ಬ್ಯಾಂಕು ಕೇಂದ್ರ ಮತ್ತು ರಾಜ್ಯ ಸರಕಾರಗಳ 5 ವಿವಿಧ ಭದ್ರತಾ ಪತ್ರಗಳಲ್ಲಿ ಹೂಡಿಕೆ ಮಾಡಿದೆ. ಎಲ್ಲಾ 5 ಭದ್ರತಾ ಪತ್ರಗಳು ಮಾರಾಟಕ್ಕೆ ಲಭ್ಯವಿರುವ (ಎ.ಎಫ್.ಎಸ್) ವಿಭಾಗದಲ್ಲಿ ಇವೆ. ಮಾರ್ಚ್ 31, 2022ರಂದು ಐದು ಭದ್ರತಾ ಪತ್ರಗಳಲ್ಲಿ ಮೂರು ಲಾಭದಲ್ಲಿದ್ದು ಎರಡು ಭದ್ರತಾ ಪತ್ರಗಳು ನಷ್ಟದಲ್ಲಿವೆ. ಮೂರು ಭದ್ರತಾ ಪತ್ರಗಳಿಂದ ರೂ.50 ಲಕ್ಷ ಲಾಭವಿದ್ದು, ಎರಡು ಭದ್ರತಾ ಪತ್ರಗಳಿಂದ ರೂ.40 ಲಕ್ಷ ನಷ್ಟವಿದ್ದು, ನಿವ್ವಳ ಲಾಭ ರೂ. 10ಲಕ್ಷ ಇರುತ್ತದೆ. ನಮ್ಮ ಬ್ಯಾಂಕಿನ ಲೆಕ್ಕ ಪರಿಶೋಧಕರು, ಮೂರು ಭದ್ರತಾ ಪತ್ರಗಳಿಂದಾದ ಲಾಭವನ್ನು ಪರಿಗಣಿಸದೆ, ಎರಡು ಭದ್ರತಾ ಪತ್ರಗಳಿಂದಾದ ರೂ. 40 ಲಕ್ಷ ನಷ್ಟಕ್ಕೆ ಅನುವು ಮಾಡಲು ಹೇಳುತ್ತಿದ್ದಾರೆ. ನಮಗೆ ಈ ಬಗ್ಗೆ ರಿಜರ್ವ್ ಬ್ಯಾಂಕಿನ ಸುತ್ತೋಲೆಯ ಉಲ್ಲೇಖದೊಂದಿಗೆ ಮಾರ್ಗದರ್ಶನ ಮಾಡಿ.**

**– ಪಟ್ಟಣ ಸಹಕಾರ ಬ್ಯಾಂಕ್ ಲಿ., ಬೆಂಗಳೂರು.**

**ಉತ್ತರ :** ರಿಜರ್ವ್ ಬ್ಯಾಂಕಿನ ಮಾಸ್ಟರ್ ಸುತ್ತೋಲೆ ದಿನಾಂಕ ಏಪ್ರಿಲ್ 1, 2022ರ ಪ್ಯಾರ 15.6ರಲ್ಲಿ ತಿಳಿಸಿದಂತೆ ಪಟ್ಟಣ ಸಹಕಾರ ಬ್ಯಾಂಕುಗಳು ತಮ್ಮ ಹೂಡಿಕೆಯನ್ನು ಬ್ಯಾಲೆನ್ಸ್ ಶೀಟ್ ಉದ್ದೇಶಕ್ಕಾಗಿ ಈ ಕೆಳಗಿನ ವರ್ಗಗಳಲ್ಲಿ ವರ್ಗೀಕರಿಸಬೇಕು. (1) ಸರಕಾರಿ ಭದ್ರತೆಗಳು (2) ಇತರೆ ಅನುಮೋದಿತ ಭದ್ರತೆಗಳು (3) ಷೇರುಗಳು (4) ಸಾರ್ವಜನಿಕ ವಲಯದ ಉದ್ಯಮಗಳ ಬಾಂಡ್‌ಗಳು ಮತ್ತು (5) ಇತರ ಹೂಡಿಕೆಗಳು ಎ.ಎಫ್.ಎಸ್ ವರ್ಗದಲ್ಲಿ ಇರಿಸಲಾದ ಹೂಡಿಕೆಗಳನ್ನು ಮೇಲೆ ತಿಳಿಸಿದ ಐದು ವರ್ಗಗಳಲ್ಲಿ ಪ್ರತ್ಯೇಕವಾಗಿ ಮೌಲ್ಯಮಾಪನ ಮಾಡಬೇಕು. ಉದಾಹರಣೆಗೆ ಮೊದಲ ವರ್ಗದಲ್ಲಿರುವ ವಿವಿಧ ಕೇಂದ್ರ ಅಥವಾ ರಾಜ್ಯ ಸರ್ಕಾರಿ ಭದ್ರತಾ ಪತ್ರಗಳನ್ನು ಪ್ರತ್ಯೇಕವಾಗಿ ಮೌಲ್ಯಮಾಪನ ಮಾಡಿ, ಆ ವರ್ಗದಲ್ಲಿರುವ ಭದ್ರತಾ ಪತ್ರಗಳಿಂದ ಆಗುವ ನಿವ್ವಳ ಲಾಭ ಅಥವಾ ನಷ್ಟವನ್ನು ಕಂಡುಕೊಳ್ಳಬೇಕು. ನಿವ್ವಳ ಲಾಭವಿದ್ದರೆ ಅದನ್ನು ಗಣನೆಗೆ ತೆಗೆದುಕೊಳ್ಳಬಾರದು. ನಿವ್ವಳ ನಷ್ಟವಿದ್ದರೆ ನಷ್ಟಕ್ಕೆ ಅನುವು ಮಾಡಬೇಕು. ನಿಮ್ಮ ಬ್ಯಾಂಕಿನಲ್ಲಿ ಎಲ್ಲಾ ಐದು ಹೂಡಿಕೆಗಳು ಸರ್ಕಾರಿ ಭದ್ರತಾ ಪತ್ರದಲ್ಲಿದ್ದು, ಮೌಲ್ಯಮಾಪನದಲ್ಲಿ ರೂ.10ಲಕ್ಷ ನಿವ್ವಳ ಲಾಭ ಬಂದಿದ್ದು, ರಿಜರ್ವ್ ಬ್ಯಾಂಕಿನ ಹೂಡಿಕೆ ಸಂಬಂಧಿತ ಮಾಸ್ಟರ್ ಸುತ್ತೋಲೆಯ ಪ್ಯಾರ 16.1.3ರಲ್ಲಿ ತಿಳಿಸಿದಂತೆ ಯಾವುದೇ ಅನುವು ಮಾಡುವ ಅವಶ್ಯಕತೆಯಿಲ್ಲ. ಕಾಲ್ಪನಿಕವಾಗಿ ಬ್ಯಾಂಕು ಇತರ ಹೂಡಿಕೆಗಳನ್ನು ಹೊಂದಿದ್ದು, ಆ ವರ್ಗದಲ್ಲಿ ಮೌಲ್ಯಮಾಪನದಲ್ಲಿ ರೂ.20 ಲಕ್ಷ ನಿವ್ವಳ ನಷ್ಟ ಉಂಟಾದಲ್ಲಿ ಬ್ಯಾಂಕು ರೂ.20ಲಕ್ಷ ಅನುವು ಮಾಡಬೇಕಾಗಿದೆ. ಸರ್ಕಾರಿ ಭದ್ರತಾ ಪತ್ರ ವರ್ಗದಲ್ಲಿ ಆದ ರೂ.10ಲಕ್ಷ ಲಾಭವನ್ನು ಇತರ ಹೂಡಿಕೆಯಿಂದಾದ ನಷ್ಟದಿಂದ ಕಳೆಯಲು ಸಾಧ್ಯವಿಲ್ಲ.

**02. ನಮ್ಮ ಬ್ಯಾಂಕಿನ ಠೇವಣಿ ಮೊತ್ತ ರೂ.100 ಕೋಟಿಗಿಂತ ಕಡಿಮೆ ಇದ್ದು ನಮ್ಮದು ಶ್ರೇಣಿ–I ಬ್ಯಾಂಕು. ರಿಜರ್ವ್ ಬ್ಯಾಂಕು ಶ್ರೇಣಿ–I ಬ್ಯಾಂಕಗಳು ಒಬ್ಬ ಗ್ರಾಹಕರಿಗೆ ನೀಡಬಹುದಾದ ಸಾಲದ ಮಿತಿಯನ್ನು ರೂ.30 ಲಕ್ಷ ದಿಂದ 60 ಲಕ್ಷಕ್ಕೆ ಏರಿಸಿದೆ. ಈಗ ನಮ್ಮ ಬ್ಯಾಂಕಿನ ವೈಯಕ್ತಿಕ ಸಾಲದ ಮಿತಿ ರೂ.35 ಲಕ್ಷವಿದ್ದು, ಒಬ್ಬ ವ್ಯಕ್ತಿಗೆ ನೀಡಬಹುದಾದ ಗೃಹ ಸಾಲದ ಮಿತಿಯನ್ನು ರೂ.20 ಲಕ್ಷವೆಂದು ನಿರ್ಧರಿಸಲಾಗಿದೆ. ರಿಜರ್ವ್ ಬ್ಯಾಂಕಿನ ಪರಿಷ್ಕೃತ ಗೃಹ ಸಾಲ ಮಿತಿಯಿಂದ ನಮ್ಮ ಬ್ಯಾಂಕಿಗೆ ಆಗುವ ಅನುಕೂಲದ ಬಗ್ಗೆ ತಿಳಿಸಿ.**

**– ಪಟ್ಟಣ ಸಹಕಾರ ಬ್ಯಾಂಕ ಲಿ, ಕಲಬುರ್ಗಿ**

**ಉತ್ತರ :** ರಿಜರ್ವ್ ಬ್ಯಾಂಕು ಶ್ರೇಣಿ–I ಮತ್ತು ಶ್ರೇಣಿ–II ಪಟ್ಟಣ ಸಹಕಾರ ಬ್ಯಾಂಕಗಳು ನೀಡಬಹುದಾದ ವೈಯಕ್ತಿಕ ಗೃಹ ಸಾಲದ ಮಿತಿಯನ್ನು ಕ್ರಮವಾಗಿ, ರೂ60 ಲಕ್ಷ ಮತ್ತು ರೂ.140 ಲಕ್ಷಕ್ಕೆ ಹೆಚ್ಚಿಸಿದರೂ, ಬ್ಯಾಂಕಗಳು ನೀಡಬಹುದಾದ ವೈಯಕ್ತಿಕ ಸಾಲದ ಮಿತಿಯು ತಮ್ಮ ಶ್ರೇಣಿ–I ಬಂಡವಾಳದ ಶೇ.15%ಕ್ಕೆ ಸೀಮಿತವಾಗಿದ್ದು, ಅದರಲ್ಲಿ ಯಾವುದೇ ಬದಲಾವಣೆ ಇಲ್ಲ. ನೀವು ತಿಳಿಸಿದಂತೆ, ಬ್ಯಾಂಕಿನ ವೈಯಕ್ತಿಕ ಸಾಲದ ಮಿತಿ ರೂ 35 ಲಕ್ಷವಿರುವುದರಿಂದ ರಿಜರ್ವ್ ಬ್ಯಾಂಕು ವೈಯಕ್ತಿಕ ಗೃಹ ಸಾಲದ ಮಿತಿಯನ್ನು ರೂ 30 ಲಕ್ಷ ದಿಂದ ರೂ 60 ಲಕ್ಷಕ್ಕೆ ಹೆಚ್ಚಿಸಿದ್ದರೂ ನಿಮ್ಮ ಬ್ಯಾಂಕು ಒಬ್ಬ ವ್ಯಕ್ತಿಗೆ ನೀಡಬಹುದಾದ ಗೃಹ ಸಾಲ ಕೇವಲ ರೂ.35 ಲಕ್ಷ.

# ಭಾರತದ ಜಿಡಿಪಿ ಅಂದಾಜು ತಗ್ಗಿಸಿದ ವಿಶ್ವ ಬ್ಯಾಂಕ್

**ವಾಷಿಂಗ್ಟನ್ :** ಹಣದುಬ್ಬರ ಏರಿಕೆ, ಪೂರೈಕೆ ವ್ಯವಸ್ಥೆಯಲ್ಲಿನ ಸಮಸ್ಯೆಗಳು ಹಾಗೂ ಜಾಗತಿಕ ಬಿಕ್ಕಟ್ಟುಗಳೂ ಆರ್ಥಿಕ ಪುನಶ್ಚೇತನಕ್ಕೆ ಅಡ್ಡಿಯಾಗುತ್ತಿರುವ ಕಾರಣ ವಿಶ್ವ ಬ್ಯಾಂಕ್ ಪ್ರಸಕ್ತ ಆರ್ಥಿಕ ವರ್ಷಕ್ಕೆ ಸಂಬಂಧಿಸಿದಂತೆ ಭಾರತದ ಬೆಳವಣಿಗೆಯ ಅಂದಾಜು ದರವನ್ನು ತಗ್ಗಿಸಿದೆ.

2022–23ರಲ್ಲಿ ಭಾರತದ ಒಟ್ಟು ಆಂತರಿಕ ಉತ್ಪಾದನೆಯ (ಜಿಡಿಪಿ) ಬೆಳವಣಿಗೆಯು ಶೇ.7.5ರಷ್ಟು ಇರಲಿದೆ ಎಂದು ವಿಶ್ವ ಬ್ಯಾಂಕ್ ಮಂಗಳವಾರ ಹೇಳಿದೆ. ಪ್ರಸಕ್ತ ಆರ್ಥಿಕ ವರ್ಷದಲ್ಲಿ ದೇಶದ ಜಿಡಿಪಿ ಬೆಳವಣಿಗೆ ಅಂದಾಜನ್ನು ವಿಶ್ವ ಬ್ಯಾಂಕ್ ಕಡಿಮೆ ಮಾಡುತ್ತಿರುವುದು ಇದು ಎರಡನೆಯ ಬಾರಿ. ಜಿಡಿಪಿ ಬೆಳವಣಿಗೆ ಶೇ.8.7ರಷ್ಟು ಇರಲಿದೆ ಎಂದು ಈ ಹಿಂದೆ ಹೇಳಿದ್ದ ವಿಶ್ವ ಬ್ಯಾಂಕ್, ನಂತರ ಏಪ್ರಿಲ್‌ನಲ್ಲಿ ಅದನ್ನು ಶೇ.8ಕ್ಕೆ ತಗ್ಗಿಸಿತ್ತು. ಈಗ ಇನ್ನಷ್ಟು ಕಡಿಮೆ ಮಾಡಿದೆ.

ದೇಶದ ಖಾಸಗಿ ವಲಯವು ಮಾಡಿರುವ ಹೂಡಿಕೆಗಳು ಹಾಗೂ ಹಲವು ಉತ್ತೇಜನ ಕ್ರಮಗಳನ್ನು ಕೇಂದ್ರ ಸರ್ಕಾರ ಜಾರಿಗೆ ತಂದಿರುವುದು ಬೆಳವಣಿಗೆಗೆ ಒತ್ತಾಸೆಯಾಗಿ ನಿಲ್ಲಲಿವೆ ಎಂದು ವಿಶ್ವ ಬ್ಯಾಂಕ್ ವರದಿಯು ಹೇಳಿದೆ.

2023–24ರ ವೇಳೆಗೆ ಬೆಳವಣಿಗೆ ಪ್ರಮಾಣವು ಶೇ.7.1ಕ್ಕೆ ತಗ್ಗುವ ಸಾಧ್ಯತೆ ಇದೆ ಎಂದೂ ಅದು ಹೇಳಿದೆ.

ಇಂಧನ, ತರಕಾರಿ ಸೇರಿದಂತೆ ಎಲ್ಲ ಬಗೆಯ ಅಗತ್ಯ ವಸ್ತುಗಳ ಬೆಲೆಯಲ್ಲಿ ಆದ ಹೆಚ್ಚಳವು ದೇಶದ ಸಗಟು ಹಣದುಬ್ಬರ ದರವನ್ನು ಏಪ್ರಿಲ್‌ನಲ್ಲಿ ಶೇ.15.08ಕ್ಕೆ ಹೆಚ್ಚಿಸಿದೆ. ಚಿಲ್ಲರೆ ಹಣದುಬ್ಬರ ಪ್ರಮಾಣವು ಶೇ.7.79ಕ್ಕೆ ತಲುಪಿದೆ.

ವಿಶ್ವ ಬ್ಯಾಂಕ್ ವರದಿಯ ಪ್ರಕಾರ ದೇಶದ ಬೆಳವಣಿಗೆಯ ಪ್ರಮಾಣವು ಈ ವರ್ಷದ ಮೊದಲಾರ್ಧದಲ್ಲಿ ವೇಗ ಕಳೆದುಕೊಂಡಿದೆ. ಕೋವಿಡ್ ಪ್ರಕರಣಗಳಲ್ಲಿ ಏರಿಕೆ, ಉಕ್ರೇನ್–ರಷ್ಯಾ ಯುದ್ಧ ಹಾಗೂ ಹಣದುಬ್ಬರ ಹೆಚ್ಚಳವು ಇದಕ್ಕೆ ಕಾರಣ.

## ಆನ್‌ಲೈನ್ ನ್ಯೂಸ್

ಈ ಪುಟದಲ್ಲಿನ ಸುದ್ದಿಗಳನ್ನು ಓದಿದ್ದೀರಾ...?
**ಕುತೂಹಲಕಾರಿಯಾದ ಸುದ್ದಿಗಳು** ನಿಮ್ಮ ಕಣ್ಣು ತಪ್ಪಿದ್ದರೆ, ಇಲ್ಲಿವೆ ಓದಿ.

- ಮಹಿಳೆಯರಿಗಿಂತ ಪುರುಷರೇ ವಾಯು ಮಾಲಿನ್ಯಕ್ಕೆ ಹೆಚ್ಚಿನ ಕಾರಣರಾಗುತ್ತಾರೆ ಎಂದು ಭಾರತೀಯ ವಿಜ್ಞಾನ ಸಂಸ್ಥೆಯ ಇತ್ತೀಚಿನ ಅಧ್ಯಯನವು ತೋರಿಸಿದೆ.
- ಕತ್ತೆ ಹಾಲು ಮನುಷ್ಯನ ಆರೋಗ್ಯಕ್ಕೆ ಉತ್ತಮ ಎನ್ನುವ ಕಾರಣಕ್ಕೆ, ಅದರ ಹಾಲಿಗೆ ದೇಶ ಹಾಗೂ ವಿದೇಶಗಳಿಂದ ಬೇಡಿಕೆಗಳು ಹೆಚ್ಚಾಗತೊಡಗಿವೆ. ದಕ್ಷಿಣ ಕನ್ನಡದ ಬಂಟ್ವಾಳ ತಾಲ್ಲೂಕಿನಲ್ಲಿ ರಾಜ್ಯದ ಮೊದಲ ಕತ್ತೆ ಸಾಕಾಣಿಕೆ, ತರಬೇತಿ ಕೇಂದ್ರ ಆರಂಭವಾಗಿದೆ.
- ಗುಜರಾತಿನ ಕ್ಷಮಾ ಬಿಂದು ಅವರು ಸ್ವಯಂ ವಿವಾಹ ಪದ್ಧತಿಯಂತೆ ಮದುವೆಯಾಗಿದ್ದು, ಇದು ದೇಶದಲ್ಲೇ ಮೊದಲ ಪ್ರಕರಣವಾಗಿದೆ.
- ಅಮೆರಿಕದ ಫ್ಲೋರಿಡಾದಲ್ಲಿ ಬಂದೂಕು ಹಿಡಿದು ಆಟವಾಡುತ್ತಿದ್ದ ಎರಡು ವರ್ಷದ ಬಾಲಕನ ಬಂದೂಕಿನಿಂದ ಆಕಸ್ಮಿಕವಾಗಿ ಹಾರಿದ ಗುಂಡು ತಂದೆ ರೆಗ್ಗಿ ಮಾಬ್ರಿಗೆ ತಗುಲಿ ಅವರು ಸಾವನ್ನಪ್ಪಿದ್ದಾರೆ.
- ಮುಳ್ಳೂರು ಗ್ರಾಮದ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯ ಮಕ್ಕಳಲ್ಲಿ ಉಳಿತಾಯದ ಮನೋಭಾವ ಮೂಡಿಸಲು ಶಿಕ್ಷಕ ಸಿ.ಎಸ್. ಸತೀಶ್ ಅವರು ಸ್ಕೂಲ್ ಬ್ಯಾಂಕ್ ಆಫ್ ಮುಳ್ಳೂರು ಸ್ಥಾಪಿಸಿದ್ದಾರೆ.
- ಬಾಹ್ಯಾಕಾಶ ಅಧ್ಯಯನ ಸಂಸ್ಥೆ ನಾಸಾ ಇದೇ ಮೊದಲ ಬಾರಿಗೆ ಬಹು ಚರ್ಚಿತ ಹಾರುವ ತಟ್ಟೆ/ ಯುಎಫ್‌ಒ ಅಥವಾ ವೈಮಾನಿಕ ರಹಸ್ಯ ವಿದ್ಯಮಾನಗಳಗಳ ಅಧ್ಯಯನಕ್ಕೆ ಮುಂದಡಿ ಇಟ್ಟಿದೆ.
- ಜಗತ್ತಿನಲ್ಲಿ ಇದೇ ಮೊದಲ ಬಾರಿಗೆ ಕ್ಯಾನ್ಸರ್‌ನಿಂದ ಸಂಪೂರ್ಣವಾಗಿ ಗುಣಮುಖವಾಗುವ ಔಷಧಿಯನ್ನು ಅಭಿವೃದ್ಧಿ ಪಡಿಸಲಾಗಿದ್ದು, ಈ ಔಷಧ ಪ್ರಾಯೋಗಿಕ ಪರೀಕ್ಷೆಯಲ್ಲಿ ಯಶಸ್ವಿಯಾಗಿದೆ. ಎಂದು ವಿಜ್ಞಾನಿಗಳು ಹೇಳಿದ್ದಾರೆ.
- ಎರಡು ಕುಟುಂಬಗಳ ನಡುವಿನ ಖಾಸಗಿ ಜಗಳಕ್ಕೆ ಸಂಬಂಧಿಸಿದಂತೆ ದಾಖಲಾಗಿದ್ದ ಎರಡು ಎಫ್‌ಐಆರ್‌ಗಳನ್ನು ರದ್ದುಪಡಿಸಿರುವ ದಿಲ್ಲಿ ಹೈಕೋರ್ಟ್, ಎರಡೂ ಕುಟುಂಬಸ್ಥರು 45 ದಿನಗಳು ಯಮುನಾ ನದಿಯನ್ನು ಸ್ವಚ್ಛಗೊಳಿಸಬೇಕು ಎಂದು ಆದೇಶಿಸಿದೆ.

## ಓದುಗರ ಅನಿಸಿಕೆ...




**ದಕ್ಷತೆಯಿಂದ ಕಾರ್ಯನಿರ್ವಹಿಸಲು ಸಾಧ್ಯ :** ಇತ್ತೀಚೆಗೆ ಬ್ಯಾಂಕಿಂಗ್ ಕ್ಷೇತ್ರದಲ್ಲಿ ಅನೇಕ ಬದಲಾವಣೆಗಳು ಆಗುತ್ತಿದ್ದು, ಅವುಗಳನ್ನು ಸಮರ್ಥವಾಗಿ ನಿರ್ವಹಿಸಲು ಪಟ್ಟಣ ಸಹಕಾರ ಬ್ಯಾಂಕುಗಳ ಅಧ್ಯಕ್ಷರು, ಉಪಾಧ್ಯಕ್ಷರು ಮತ್ತು ಮುಖ್ಯಕಾರ್ಯನಿರ್ವಹಣಾಧಿಕಾರಿಗಳಿಗೆ ಹಾಗೂ ಅಧಿಕಾರಿಗಳಿಗೆ ಉನ್ನತ ಮಟ್ಟದ ವಿವಿಧ ವಿಷಯಗಳನ್ನೊಳಗೊಂಡ ತರಬೇತಿಯನ್ನು ನಮ್ಮ ಮಹಾಮಂಡಳವು ಆಗಿಂದಾಗ್ಗೆ ಏರ್ಪಡಿಸುತ್ತಿರುವುದು ಉಪಯುಕ್ತವಾಗಿದೆ. ಇದರಿಂದ ಸಹಕಾರ ಬ್ಯಾಂಕುಗಳು ಉತ್ತಮ ರೀತಿಯಿಂದ, ಹೆಚ್ಚಿನ ದಕ್ಷತೆಯಿಂದ ಕಾರ್ಯ ನಿರ್ವಹಿಸಲು ಸಾಧ್ಯವಾಗುತ್ತದೆ. ಮಹಾಮಂಡಳಕ್ಕೆ ಧನ್ಯವಾದಗಳು.

**▸▸ ಷಣ್ಮುಖಪ್ಪ ಪಟ್ಟಣದ, ಸಿಂಧಗಿ**

**ಸಹಕಾರಿಗಳಿಗೆ ಪ್ರಯೋಜನವಾಗಲಿದೆ :** ಸಹಕಾರಿ ಸಂಸ್ಥೆಗಳಿಗೆ ಗವರ್ನಮೆಂಟ್ ಇ-ಮಾರ್ಕೆಟ್ ಪ್ಲೇಸ್ (GeM) ಗೆ ಅವಕಾಶ ನೀಡಲು ಕೇಂದ್ರ ಸರ್ಕಾರ ಸಮ್ಮತಿಸಿರುವುದು ಶ್ಲಾಘನೀಯವಾದದ್ದು, ಇದರಿಂದ ಸಹಕಾರಿಗಳು ಕೂಡ ಖರೀದಿದಾರರಾಗಿ ಇ-ಮಾರ್ಕೇಟ್ ಪ್ಲೇಸ್‌ನಲ್ಲಿ ನೋಂದಣಿ ಮಾಡಿಸಿಕೊಳ್ಳಬಹುದಾಗಿದ್ದು, ಇ-ಮಾರ್ಕೇಟ್ ಪ್ಲೇಸ್‌ನಲ್ಲಿ ಸ್ಪರ್ಧಾತ್ಮಕ ದರದಲ್ಲಿ ಉತ್ಪನ್ನಗಳನ್ನು ಖರೀದಿಸಬಹುದಾಗಿದ್ದು ಇದು ಸಹಕಾರಿಗಳಿಗೆ ಪ್ರಯೋಜನವಾಗಲಿದೆ.

**▸▸ ರವಿಕುಮಾರ ಪಾಟೀಲ, ಬಾಗಲಕೋಟೆ**

ಸಂಪಾದಕರು :
**ಪುಂಡಲೀಕ ಎನ್. ಕೇರೂರೆ,**
ಮುಖ್ಯ ಕಾರ್ಯನಿರ್ವಹಣಾಧಿಕಾರಿ,
ಕರ್ನಾಟಕ ರಾಜ್ಯ ಪಟ್ಟಣ ಸಹಕಾರ
ಬ್ಯಾಂಕುಗಳ ಮಹಾಮಂಡಳ ನಿ.,
ಬೆಂಗಳೂರು.

**ಇವರಿಗೆ,**

Edited, Published and printed by Pundalik N. Kerure, C.E.O. on behalf of the
Karnataka State Co-operative Urban Banks Federation Ltd., Bangalore - 560027.
Published at : # 132, K.H. Road, Bangalore - 560027.
Printed at : Navarathna Printers, # 35, 3rd Cross, Sudhamanagar, Bangalore – 560027.